ಕ್ರ.ಸಂ.	ಜಿಲ್ಲೆಯ ಹೆಸರು	ಗ್ರಂಥಾಲಯಗಳು
13.	ಹಾಸನ	120
14.	ಉಡುಪಿ	50
15.	ಚಾಮರಾಜನಗರ	75
16.	ಬೆಳಗಾಂ	190
17.	ಧಾರವಾಡ	65
18.	ಉತ್ತರ ಕನ್ನಡ	156
19.	ಬಿಜಾಪುರ	104
20.	ಗದಗ್	76
21.	ಹಾವೇರಿ	96
22.	ಬಾಗಲಕೋಟೆ	119
23.	ಗುಲ್ಬರ್ಗಾ	241
24.	ಬೀದರ್	129
25.	ಬಳ್ಳಾರಿ	153
26.	ರಾಯಚೂರು	77
27.	ಕೊಪ್ಪಳ	81
	ಒಟ್ಟು	**3251**

ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಕೈಗೊಂಡ ಮಾಹಿತಿ ಸಿಂಧು ಯೋಜನೆಯ ಬಗ್ಗೆ

2949(3250) ಶ್ರೀ ಕೃಷ್ಣಪ್ಪ ವಿ. (ದೊಡ್ಡಬಳ್ಳಾಪುರ) ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಮಾಹಿತಿ ಸಿಂಧು ಯೋಜನೆಯಡಿಯಲ್ಲಿ ಕಂಪ್ಯೂಟರ್‌ಗಳನ್ನು ಸರಬರಾಜು ಮಾಡಿರುವ ಶಾಲೆಗಳ ಸಂಖ್ಯೆ ಎಷ್ಟು;

ಆ) ಇದರಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಕಂಪ್ಯೂಟರ್ ಸರಬರಾಜು ಮಾಡಿರುವ ತಾಲ್ಲೂಕುವಾರು ಶಾಲೆಗಳ ಸಂಖ್ಯೆ ಎಷ್ಟು;

ಇ) ಈ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಶಿಕ್ಷಣವನ್ನು ಹಾಲಿ ನೀಡಲಾಗುತ್ತಿದೆಯೇ;

ಈ) ದೊಡ್ಡಬಳ್ಳಾಪುರ ತಾಲ್ಲೂಕಿನ ಯಾವ ಯಾವ ಶಾಲೆಗಳಿಗೆ ಕಂಪ್ಯೂಟರ್ ಸರಬರಾಜು ಮಾಡಲಾಗಿದೆ; ಈ ಶಾಲೆಗಳಿಗೆ ಶಿಕ್ಷಕರನ್ನು ನೇಮಕ ಮಾಡಲಾಗಿದೆಯೇ?

ಶ್ರೀ ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) ಮಾಹಿತಿ ಸಿಂಧು ಯೋಜನೆಯಡಿಯಲ್ಲಿ 1000 ಸರ್ಕಾರಿ ಪ್ರೌಢ ಶಾಲೆಗಳಿಗೆ ಕಂಪ್ಯೂಟರ್‌ಗಳನ್ನು ಸರಬರಾಜು ಮಾಡಲಾಗಿದೆ.

ಆ) ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಯೋಜನೆಗಳನ್ನು ಜಾರಿಗೊಳಿಸಲಾಗಿದೆ. ತಾಲ್ಲೂಕುವಾರು ಶಾಲೆಗಳ ಸಂಖ್ಯೆ ಕೆಳಕಂಡಂತಿದೆ:

1. ಚನ್ನಪಟ್ಟಣ – 03 ಶಾಲೆಗಳು
2. ದೇವನಹಳ್ಳಿ – 05 ಶಾಲೆಗಳು

3. ದೊಡ್ಡಬಳ್ಳಾಪುರ – 06 ಶಾಲೆಗಳು
4. ಹೊಸಕೋಟೆ – 07 ಶಾಲೆಗಳು
5. ಕನಕಪುರ – 07 ಶಾಲೆಗಳು
6. ಮಾಗಡಿ – 06 ಶಾಲೆಗಳು
7. ನೆಲಮಂಗಲ – 04 ಶಾಲೆಗಳು
8. ರಾಮನಗರ – 07 ಶಾಲೆಗಳು

ಇ) ಹೌದು.

ಈ) ದೊಡ್ಡಬಳ್ಳಾಪುರ ತಾಲ್ಲೂಕಿನ ಕೆಳಕಂಡ 6 ಶಾಲೆಗಳಿಗೆ ಕಂಪ್ಯೂಟರ್‌ಗಳನ್ನು ಸರಬರಾಜು ಮಾಡಲಾಗಿದೆ.

1. ಸರ್ಕಾರಿ ಪ್ರೌಢ ಶಾಲೆ, ಹಣಬೆ
2. ಸರ್ಕಾರಿ ಪದವಿ ಪೂರ್ವ ಕಾಲೇಜು, ದೊಡ್ಡಬಳ್ಳಾಪುರ
3. ಸರ್ಕಾರಿ ಪದವಿ ಪೂರ್ವ ಕಾಲೇಜು, ಕನಸವಾಡಿ
4. ಸರ್ಕಾರಿ ಪ್ರೌಢ ಶಾಲೆ, ಚನ್ನವೀರನಹಳ್ಳಿ
5. ಸರ್ಕಾರಿ ಪ್ರೌಢ ಶಾಲೆ, ತೂಬಗೆರೆ
6. ಸರ್ಕಾರಿ ಪ್ರೌಢ ಶಾಲೆ, ದೊಡ್ಡ ಬೆಳವಂಗಲ

ಪ್ರತಿ ಶಾಲೆಯಲ್ಲಿ ನಿರ್ವಹಣಾ ಸಂಸ್ಥೆಯ ವತಿಯಿಂದ ನೇಮಿಸಲ್ಪಟ್ಟ ಇಬ್ಬರು ಕಂಪ್ಯೂಟರ್ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿರುತ್ತಾರೆ.

ರಾಜೀವ್‌ಗಾಂಧಿ ವಸತಿ ಯೋಜನೆಗೆ ನೀಡುತ್ತಿರುವ ಅನುದಾನ ಕುರಿತು

2950(3251) ಶ್ರೀ ಕೃಷ್ಣಪ್ಪ ವಿ. (ದೊಡ್ಡಬಳ್ಳಾಪುರ) ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ರಾಜೀವ್ ಗಾಂಧಿ ವಸತಿ ಯೋಜನೆಯಲ್ಲಿ ನೀಡುತ್ತಿರುವ ಅನುದಾನದಲ್ಲಿ ಫಲಾನುಭವಿಗಳಿಗೆ ನಗರ ಪ್ರದೇಶದಲ್ಲಿ ನೀಡುವ ಸಹಾಯಧನದ ಮೊತ್ತವೆಷ್ಟು; ಗ್ರಾಮಾಂತರ ಪ್ರದೇಶದಲ್ಲಿ ನೀಡುವ ಸಹಾಯಧನದ ಮೊತ್ತವೆಷ್ಟು;

ಆ) ಸಹಾಯಧನವು ನಗರ ಪ್ರದೇಶಗಳಿಗೆ ಹಾಗೂ ಗ್ರಾಮೀಣ ಪ್ರದೇಶಗಳಿಗೆ ತಾರತಮ್ಯ ವಿದೆಯೇ; ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು;

ಇ) ಇದನ್ನು ಏಕ ರೂಪದಲ್ಲಿ ತರಲು ಸಾಧ್ಯವೇ?

ಶ್ರೀ ಸಿ.ಆರ್. ಸಗೀರ್ ಅಹಮದ್ (ವಸತಿ ಸಚಿವರು)

ಅ) ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳಡಿಯಲ್ಲಿ ಫಲಾನುಭವಿಗಳಿಗೆ ನೀಡುತ್ತಿರುವ ಸಹಾಯಧನ ವಿವರ ಕೆಳಗಿನಂತಿದೆ.

ಯೋಜನೆ	ವರ್ಗ	ಆರ್ಥಿಕ ಸಹಾಯ		
		ಸಹಾಯ ಧನ	ಸಾಲ	ಒಟ್ಟು
ನಗರ ಆಶ್ರಯ	ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಸಾಮಾನ್ಯ		25000	25000